ಎಚ್. ಮಂಜಪ್ಪ, ಸಂತೆಬೆನ್ನೂರು

ಟೀವಿ, ಮೊಬೈಲ್ ನೋಡುತ್ತಾ ಊಟ ಮಾಡಬಾರದೆಂದಿದ್ದರೂ ಈಗಿನ ಮಕ್ಕಳಿಗೆ ಮೊಬೈಲ್ ತೋರಿಸುತ್ತಾ ತಿನ್ನಿಸುವರಲ್ಲ?



‘ಸ್ಕ್ರೀಮ್ ಟೈಮ್ ಕಡಿಮೆಯಾಗಲು ಸ್ಕ್ರೀನ್ ಟೈಮೇ ಸುಲಭ ದಾರಿ’ ಎಂದರಾ ಪೋಷಕರು.

ವಿಜಯಕುಮಾರ್ ಎಚ್.ಕೆ. ರಾಯಚೂರು

ಇಲ್ಲೊಬ್ಬ ಹುಡುಗಿಯರನ್ನು ಕಂಡಾಗೆಲ್ಲ ಆಂತರ್ಯದ ಅಂತರಾಳದಲ್ಲದೇನೋ ಅತೃಪ್ತಿ, ಅದೆಂಥದೋ ಅಶಾಂತಿ ಎನ್ನುವುದೇಕೆ?

ಅದು ಸುಂದರಿಯರನ್ನು ಕಂಡು ಬಿಪಿ ಏರಿದಾಗ ಆಸಿಡ್ ರಿಫ್ಲಕ್ಸ್ ಆದುದರ ವಿವರಣೆ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಪ್ರಪಂಚದಲ್ಲಿ ಎಲ್ಲರಿಗಿಂತಲೂ ಸುಂದರವಾದ ವ್ಯಕ್ತಿ ಯಾರು?

ತೃಪ್ತಿಯ ನಗೆ ಬೀರುತ್ತಾ ಕುಳಿತ ಸರಳ ಜೀವಿ.

ಸುರೇಶ್ ಬಿ.ವಿ. ಬೆಂಗಳೂರು

ಈಗಿನ ಮದುವೆಗಳಲ್ಲಿ ವಧು–ವರರಲ್ಲಿ ನಾಚಿಕೆ, ಸಂಕೋಚಗಳೇ ಕಾಣುವುದಿಲ್ಲವಲ್ಲ?



ಅವೆರಡೂ ಮಾಯವಾಗುವಂತೆ ಪ್ರಿವೆಡ್ಡಿಂಗ್ ಶೂಟ್‌ನವರು ನೋಡಿಕೊಳ್ಳುತ್ತಾರೆ.

ಎಲ್.ಐ.ಸಿ. ವಿಜೇಂದ್ರ, ಮೈಸೂರು

ಯಾರಾದರೂ ಸ್ವರ್ಗಕ್ಕೆ ಹೋಗಿ ಬಂದವರು ಇದ್ದಾರಾ?

ಹ್ಹ! ವಾಪಸ್ಸು ಬರಲು ಮನಸ್ಸಾಗುವುದಾದರೆ ಅದು ಸ್ವರ್ಗವೇ ಅಲ್ಲ.

ಮಾಲತೇಶ್ ಪಾಟೀಲ್, ಹುಬ್ಬಳ್ಳಿ

ಈಗ ಎಐ ವಿಡಿಯೊ, ನೈಜ ವಿಡಿಯೊಗಳ ಮಧ್ಯೆ ಅಂತರವೇ ಕಾಣುತ್ತಿಲ್ಲವಲ್ಲ?

ಕೃತಕ ಗುಲಾಬಿಯ ಮೇಲೆ ಕೂರದ ದುಂಬಿಯ ಜಾಣ್ಮೆ ಇದ್ದರೆ ಅಂತರವು ತಿಳಿಯುತ್ತದೆ.

ವಾಸಣ್ಣ, ಧಾರವಾಡ

ಬಾಲಕರಿಗೂ, ಹಿಂಬಾಲಕರಿಗೂ ಏನು ವ್ಯತ್ಯಾಸ?

ಬಾಲಕರಲ್ಲಿ ಕಲಿಕೆ ಹೆಚ್ಚು, ಹಿಂಬಾಲಕರಲ್ಲಿ ನಕಲಿಕೆ ಹೆಚ್ಚು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ನಾವು ಸತ್ತರೆ ಮಣ್ಣದೆ. ಮಣ್ಣೇ ಸತ್ತರೆ ನಾವಿಲ್ಲ. ಅಲ್ಲವೆ?

ಸುನಿತಾ ವಿಲಿಯಮ್ಸ್ ಮಣ್ಣಿಲ್ಲದ ಗಗನನೌಕೆಯಲ್ಲಿ ಇದ್ದರಲ್ಲ! ನರಜನ್ಮ ಸುಲಭವಾಗಿ ನಶಿಸದು.

ಪಿ. ಜಯವಂತ ಪೈ, ಕುಂದಾಪುರ

ಮರೆವು ವರವೋ, ಶಾಪವೋ?

ಸಾಲ ಪಡೆದವನಿಗೆ ವರ, ಕೊಟ್ಟವನಿಗೆ ಶಾಪ.

ಸುಮಾ ರಮೇಶ್, ಹಾಸನ

ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಬದಲು ಉತ್ಪಾದನೆಯನ್ನೇ ಸ್ಥಗಿತಗೊಳಿಸುವುದು ಒಳಿತಲ್ಲವೆ?

‘ಬ್ಯಾನ್ ಆಗುತ್ತದೆ’ ಎನ್ನುತ್ತಾ ಎಲಾಸ್ಟಿಕ್‌ನಂತೆ ಲಂಚ ಎಳೆಯಲು ಪ್ರೊಡಕ್ಷನ್ ಪೂರಕ.

ಆಶಾ ಅಪ್ರಮೇಯ, ದಾವಣಗೆರೆ

ಕ್ಲಾಕಲ್ಲಿರುವಂತೆ ಚಲಿಸುವ ಮುಳ್ಳುಗಳಿರದ ಕ್ಯಾಲೆಂಡರನ್ನು ಕಂಡು ಬದಲಾಗುವ ದಿನಾಂಕವನ್ನು ನಾವು ಹೇಗೆ ಪತ್ತೆ ಹಚ್ಚುತ್ತೇವೆ?

ಮುಳ್ಳಿನಂತೆ ಚುಚ್ಚುವ **EMI, instalment reminder**ಗಳನ್ನು ಮಾರ್ಕ್ ಮಾಡಿರುತ್ತೀವಲ್ಲ.

ವಸುಧಾ ಜೈಶಂಕರ್, ಬೆಂಗಳೂರು

ನಮ್ಮ ರಾಜಕಾರಣಿಗಳಿಗೆ ಅಧಿಕಾರ ವೈರಾಗ್ಯ ಯಾವಾಗ ಬರುತ್ತದೆ?

ತ್ರಾಣ ಉಡುಗಿ, ತಮ್ಮ ಮಗ, ಮೊಮ್ಮಗನಿಗಾಗಿ ‘ಕ್ಷೇತ್ರತ್ಯಾಗ’ ಮಾಡುವಂದು.

ಜಗದೀಶ ಬಿ. ಹೊಸೂರು, ಮೈಸೂರು

ಜನಪ್ರತಿನಿಧಿಗಳಿಗೆ ತಮ್ಮ ತಮ್ಮ ಕ್ಷೇತ್ರಗಳ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತಿಲ್ಲ. ಏಕೆ?

ತಮ್ಮ ತಮ್ಮವರ ಅಭಿವೃದ್ಧಿಗೆ ಸೆಣಸಲೇ ಸಮಯ ಸಾಲುತ್ತಿಲ್ಲವಂತೆ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು

ಬಿಸಿಬೇಳೆಭಾತ್ ತಣ್ಣಗಾದಾಗ ಅದನ್ನು ಏನೆಂದು ಕರೆಯುವರು?

ಮುದಿ ಬೇಳೆಭಾತ್.

ಕೆ. ಶ್ರೀನಿವಾಸ, ಬೆಂಗಳೂರು

ಪ್ರಾಣಿಗಳಲ್ಲೇಕೆ ಟೆರರಿಸಂ ಇಲ್ಲ?

ಅವಕ್ಕೆ ‘ಥೂ ಮನುಷ್ಯ!’ ಎಂದು ಬೈಸಿಕೊಳ್ಳಲು ಇಷ್ಟವಿಲ್ಲ.

ಚಿದಂಬರ ಭಟ್, ಭೀಮನಕಟ್ಟೆ

ಪ್ರತಿ ಕ್ಷೇತ್ರದಲ್ಲಿ ಅತ್ಯಲ್ಪ ಸಂಖ್ಯೆಯ ಜಾತಿಯವರನ್ನು ನಿಲ್ಲಿಸಿದರೆ ವೋಟರ್ ಜಾತಿ ನೋಡಿ ವೋಟಿಸುವುದನ್ನು ತಪ್ಪಿಸಬಹುದಲ್ಲವೆ?

ಆಗ ಹಣ ಮಾತನಾಡುತ್ತದೆ. ನಾವು ಯೋಗ್ಯತೆಯನ್ನು ಗೆಲ್ಲಿಸುವ ಯೋಗ್ಯತೆಯನ್ನು ಕಳೆದುಕೊಂಡಿದ್ದೇವೆ.

ಭಾರತೀ ಗಂಗಾಧರ್, ಬೆಂಗಳೂರು

ಈಗ ಮಕ್ಕಳಿಗಿಂತ ವೃದ್ಧರೇ ಹೆಚ್ಚು ಮೊಬೈಲಲ್ಲಿ ಮುಳುಗಿರುವುದರ ಪರಿಣಾಮ?



ನೆಕ್ ಬೆಲ್ಟ್ ವ್ಯಾಪಾರಿಗೆ, ನೇತ್ರವೈದ್ಯರಿಗೆ ಶುಕ್ರದೆಸೆ.

ಮಲ್ಲಿಕಾರ್ಜುನ, ಸುರಧೇನುಪುರ

‘ನಮ್ಮವರಿಗೆ ಅನ್ಯಾಯವಾದರೆ ನಾವು ಸುಮ್ಮನಿರುವುದಿಲ್ಲ’ ಎಂಬ ಸ್ವಾಮಿಗಳ ಹೇಳಿಕೆಯ ಮರ್ಮ?

ಪೀಠಾತುರಾಣಾಂ ನ ಭಯಂ ನ ಲಜ್ಜಾ ಎಂದು.

ಶಿವಮೊಗ್ಗ ರಮೇಶ್, ಮೈಸೂರು

ಯಾವುದೇ ತಪ್ಪು ಮಾಡದ, ಸ್ವಚ್ಛಂದದಿ ಹಾರಾಡಿಕೊಂಡಿದ್ದ ಪಕ್ಷಿಯನ್ನು ಬಂಧನದಲ್ಲಿಡುವುದು ಸರಿಯೆ?

ಸೌಂದರ್ಯವೇನು ಕಡಿಮೆ ಅಪರಾಧವೇ? ಕಾಗೆಯಂತಿದ್ದರೆ ಕ್ಯಾರೇ ಎನ್ನರು.

■ **ರಾಮ್**